

## ಪೋಲಿಯೊ ಫಜೀತಿ

ನಾನು ಬ್ಯಾಂಕ್ ಉದ್ಯೋಗಿ. ಅದೊಂದು ದಿನ ಗ್ರಾಹಕನೊಬ್ಬ ನಮ್ಮ ಕ್ಲರ್ಕ್ ಬಳಿ ಯಾವುದೊ ವಿಷಯಕ್ಕೆ ಗಲಾಟೆ ಮಾಡುತ್ತಿದ್ದ. ನಮ್ಮ ಕ್ಲರ್ಕ್ 'ಅಲ್ಲಿ ನಮ್ಮ ಆಫೀಸರ್ ಇದ್ದಾರೆ, ಅವರನ್ನೇ ಕೇಳಿ' ಎಂದು ನಯವಾಗಿ ಅವನನ್ನು ನನ್ನ ಬಳಿ ಕಳಿಸಿದ. ಸಿಟ್ಟಿನಿಂದ ನನ್ನ ಕೌಂಟರ್‌ಗೆ ಬಂದ ಆ ವ್ಯಕ್ತಿ, 'ಏನ್ರಿ? ಯಾರಿಗೊ ಪೋಲಿಯೊ ಡ್ರಾಪ್ಸ್ ಹಾಕಿ, ನನ್ನ ಅಕೌಂಟ್‌ನಿಂದ ದುಡ್ಡು ಕಡಿದಿದ್ದೀರಾ?' ಎಂದು ಕೇಳಿದ. ಬ್ಯಾಂಕು ಯಾವಾಗಿಂದ ಲಸಿಕೆ ಹಾಕುವ ಕೆಲಸ ಆರಂಭಿಸಿತೊ! ಎಂದು ಕ್ಷಣ ದಂಗಾದೆ. ಅವನ ಖಾತೆ ಸಂಖ್ಯೆ ಪಡೆದು ಪರಿಶೀಲಿಸಿದೆ. ಕಾರಣ ಗೊತ್ತಾಯ್ತು. ಆತನದ್ದು ಚಾಲ್ತಿ ಖಾತೆ. ಹಾಗಾಗಿ ಮೂರು ತಿಂಗಳಿಗೊಮ್ಮೆ ಫೋಲಿಯೊ ಶುಲ್ಕ (Folio charges) ಕಡಿತಗೊಳ್ಳುತ್ತದೆ. ಇದನ್ನರಿಯದ ಆತ ಯಾರಿಗೋ ಹಾಕಿದ ಪೋಲಿಯೊಕ್ಕೆ ತನ್ನ ಖಾತೆಯಿಂದ ಹಣ ಕಡಿತಗೊಳಿಸಿದ್ದಾರೆ ಎಂದು ಸಿಟ್ಟಾಗಿದ್ದ. ಆತನಿಗೆ ಇದನ್ನು ತಿಳಿಸಿ, ಸಮಾಧಾನ ಮಾಡುವುದರಲ್ಲಿ ಸಾಕಾಯಿತು.

**ಕಾರ್ತಿಕ್ ಎನ್.**

## ಹುಚ್ಚನ ಹೆಂಡತಿ...

ನನ್ನ ಮೂರು ವರ್ಷದ ಮಗಳು ಐಶ್ವರ್ಯಾ ಅಂಗನವಾಡಿಯಲ್ಲಿ ಕಲಿತ ಎಲ್ಲಾ ಶಿಶು ಗೀತೆಗಳನ್ನು ಮನೆಯಲ್ಲೂ ಗುನುಗುತ್ತ ಇರುತ್ತಾಳೆ. ಅದರಲ್ಲಿ 'ಒಂದು ದಿನ ಹುಚ್ಚನ ಹೆಂಡತಿ ಕೋಡುಬಳೆ ಮಾಡಿದ್ಲು...' ಅವಳ ನೆಚ್ಚಿನ ಗೀತೆ. ಯಾವಾಗಲೂ ಅವಳ ಬಾಯಿಯಲ್ಲಿ ಆ ಹಾಡೇ ಇರುತ್ತದೆ. ಆ ದಿನ ಪಕ್ಕದ ಮನೆಯ ಗೀತಾ ಆಂಟಿ 'ಬಾ ಪುಟ್ಟಿ, ನಿನಗೆ ಕೋಡುಬಳೆ ಕೊಡ್ತೀನಿ' ಎಂದು ಕರೆದರು. ಅವರಿಂದ ಕೋಡುಬಳೆ ಪಡೆದು ತಿನ್ನುತ್ತ ಆಚೆ ಬರುವಾಗ ಪುಟ್ಟಿ, 'ಒಂದು ದಿನ ಹುಚ್ಚನ ಹೆಂಡತಿ ಕೋಡುಬಳೆ ಮಾಡಿದ್ಲು...' ಎಂದು ಹಾಡುತ್ತ ಬಂದಳು. ನನಗಂತೂ ಮಾರನೇ ದಿನ ಅವರೆದುರು ತಲೆ ಎತ್ತಲಾಗಲಿಲ್ಲ.

**ಎಸ್. ಅನ್ವಿತಾ**



ಚಿತ್ರಗಳು: ಗಣೇಶ ಆಚಾರ್ಯ